ನೀರು ತಡೆ ಅಣೆಕಟ್ಟಿಗೆ ಹಲಗೆಗಳನ್ನು ಸಕಾಲದಲ್ಲಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಉಳಿದ 5 ಕಿಂಡಿ ಅಣೆಕಟ್ಟುಗಳು ದುರಸ್ಥಿಯನ್ನು ಪುನರುಜ್ಜೀವನ ಕಾಮಗಾರಿಯನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೆತ್ತಿಕೊಳ್ಳಲಾಗುವುದು.

ಮೂಡಬಿದ್ರೆಯಲ್ಲಿ ಉಪ ಖಜಾನೆ ಕಛೇರಿ ಉದ್ಘಾಟನೆ

1162 (1507) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮುಲ್ಕಿ- ಮೂಡಬಿದ್ರೆ ಕ್ಷೇತ್ರದ ಮೂಡಬಿದ್ರೆಯಲ್ಲಿ ಉಪಖಜಾನೆ ಕಛೇರಿ ಕಟ್ಟಡ ಪೂರ್ತಿಗೊಂಡು ಮೂರು ವರ್ಷ ಕಳೆದರೂ ಈ ಕಟ್ಟಡ ಉದ್ಘಾಟನೆಗೊಂಡಿಲ್ಲದಿರುವುದಕ್ಕೆ ಕಾರಣವೇನು?

ಶ್ರೀ ಎಸ್. ಎಂ.ಕೃಷ್ಣ (ಮಾನ್ಯ ಮುಖ್ಯ ಮಂತ್ರಿಗಳು)

1) ಮೂಡಬಿದ್ರೆ ಉಪ ಖಜಾನೆ ಕಟ್ಟಡದಲ್ಲಿ ಗಣಕೀಕರಣದ ಕಾಮಗಾರಿ ನಡೆಯುತ್ತಿದೆ. ಗಣಕೀಕರಣದ ಕಾಮಗಾರಿ ನಡೆಯುತ್ತಿದೆ. ಗಣಕೀಕರಣದ ಕಾರ್ಯ ಪೂರ್ಣಗೊಂಡ ನಂತರ ಉಪ ಖಜಾನೆ ಕಾರ್ಯಾಲಯವನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸುವ ಬಗ್ಗೆ ಪರಿಶೀಲಿಸಲಾಗುವುದು.

ಸಣ್ಣ ನೀರಾವರಿಗೆ ಸಂಬಂಧಪಟ್ಟ ಕೆರೆಗಳನ್ನು ದುರಸ್ತಿಪಡಿಸುವುದು

1163 (1524) ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಮತ ಕ್ಷೇತ್ರಕ್ಕೆ ಸೇರಿದ ನೆಲಮಂಗಲ ತಾಲ್ಲೂಕಿನ ಕಸಬಾ, ದೊಡ್ಡ ಬಳ್ಳಾಪುರ ತಾಲ್ಲೂಕಿನ ಮಧುರೆ ಹೋಬಳಿ ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿ ಹಾಗೂ ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯಲ್ಲಿ ಸಣ್ಣ ನೀರಾವರಿಯ ವ್ಯಾಪ್ತಿಗೆ ಬರುವ ಕೆರೆಕುಂಟಿಗಳು ಎಷ್ಟು;

ಆ) ಅವುಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇವುಗಳನ್ನು ದುರಸ್ತಿಪಾವುಡಿಸಲು ಎಷ್ಟು ಕೆರೆಗಳನ್ನು ಗುರುತಿಸಲಾಗಿದೆ ಹಾಗೂ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಪೂರ್ಣ ಮಾಹಿತಿ ನೀಡುವುದು

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಒಟ್ಟು 17 ಕೆರೆ ಕುಂಟಿಗಳು.

ಆ) ಬಂದಿದೆ.

ಇ) ಕೆರೆಗಳ ವಿವರಗಳನ್ನು ಅನುಬಂಧ 'ಅ' ನಲ್ಲಿ ನೀಡಲಾಗಿದೆ. ಈ ಪೈಕಿ 4 ಕೆರೆಗಳನ್ನು ದುರಸ್ಥಿಗೊಳಿಸಲು ಗುರುತಿಸಲಾಗಿದ್ದು ರೂ. 7.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

ವಿವರ ಅನುಬಂಧ 'ಅ'ನಲ್ಲಿ ನೀಡಿದೆ. ಇದಲ್ಲದೆ ಅತಿವೃಷ್ಟಿಯಿಂದಾಗಿ ಹಾನಿಯುಂಟಾಗಿರುವ 4 ಕೆರೆಗಳ ದುರಸ್ಥಿ ಆಗಬೇಕಾಗಿದ್ದು (ವಿವರ ಅನುಬಂಧ 'ಇ' ನಲ್ಲಿ ನೀಡಿದೆ.) ಅನುದಾನ ಬಿಡುಗಡೆ ಆದ ಕೂಡಲೇ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ ''ಅ''

ನೆಲಮಂಗಲ ಮತಕ್ಷೇತ್ರಕ್ಕೆ ಸಂಬಂಧಿಸಿದ 4 ತಾಲ್ಲೂಕುಗಳಲ್ಲಿ ಹೋಬಳಿವಾರು ಕೆರೆಗಳ ವಿವರ.

ಕ್ರಮ ಸಂಖ್ಯೆ	ತಾಲ್ಲೂಕು	ಹೋಬಳಿ	ಕೆರೆಗಳ ಹೆಸರು	ಕೆರೆಯ ಸ್ಥಿತಿ
1.	ನೆಲಮಂಗಲ	ಕಸಬಾ	1) ನೆಲಮಂಗಲ ಕೆರೆ	
			2) ಅರಿಸಿನಕುಂಟೆ ಕೆರೆ	
			3) ಗೊಲ್ಲಹಳ್ಳಿ ಕೆರೆ	
			4) ಬರಡಿಕೆರೆ	
			5) ಶ್ರೀನಿವಾಸಪುರ ಕೆರೆ	
			6) ಟಿ.ಬೇಗೂರು ಕೆರೆ	
2.	ದೊಡ್ಡಬಳ್ಳಾಪುರ	ಮಧುರೆ	1) ಹೊನ್ನಾಪುರ ದೊಡ್ಡಕೆರೆ	
			2) ಸಿಂಪಾಡಿಪುರ ಕೆರೆ	
			3) ಕಾಡನೂರು ಕೆರೆ	
			4) ಮಧುರೆ ಅಮಾನಿ ಕೆರೆ	
			5) ದೊಡ್ಡತುಮಕೂರು ಜಿಲ್ಲೆ.	
3.	ಮಾಗಡಿ	ಸೋಲೂರು	1) ಸೋಲೂರು ದೊಡ್ಡ ಕೆರೆ	
			2) ಗುಡೇ ಮಾರನಹಳ್ಳಿ ಕೆರೆ	
			3) ಬಾನಾವಾಡಿ ಕೆರೆ	
4.	ಬೆಂಗಳೂರು ಉತ್ತರ	ದಾಸನಪುರ	1) ಮಾದಾಪುರ ಕೆರೆ	
			2) ಆಲೂರು ಕೆರೆ	
			3) ಸೊಂಡೆಕೊಪ್ಪ ಕೆರೆ	
	ಒಟ್ಟು		17 ಕೆರೆಗಳು	

ಅನುಬಂಧ- ಆ

ನೆಲಮಂಗಲ ಮತಕ್ಷೇತ್ರದಲ್ಲಿರುವ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ದುರಸ್ತಿಗಾಗಿ ಗುರುತಿಸಲ್ಪಟ್ಟ ಕೆರೆಗಳ ವಿವರಗಳು

ಕ್ರಮ ಸಂ.	ತಾಲ್ಲೂಕು	ಹೋಬಳಿ	ಕಾಮಗಾರಿಯ ಹೆಸರು	ಲೆಕ್ಕ ಶೀರ್ಷಿಕೆ	ಅಂದಾಜು ವೊತ್ತ	2000-01ನೇ ಸಾಲಿನ ಅನುದಾನ	ಕಾಮಗಾರಿಯಹಂತ
1	2	3	4	5	6	7	8
1.	ನೆಲಮಂಗಲ	ಕಸಬಾ	ಬರಡಿಕೆರೆ ತೂಬು ಅಭಿವೃದ್ಧಿ.	4702 ಕೆರೆ ಕಲ್ಯಾಣ	5.00	1.50	ಟೆಂಡರ್ ಅಧೀಕ್ಷಕರ ಅಭಿಯಂತರವರ ಪರಿಶೀಲನೆಯಲ್ಲಿದೆ.
2.	ನೆಲಮಂಗಲ	ಕಸಬಾ	ಟಿ.ಬೇಗೂರು ಕೆರೆ ಹೂಳೆತ್ತುವುದು	4702 ಕೆರೆಗಳಲ್ಲಿ ಹೂಳೆತ್ತುವುದು	5.00	1.50	ಅಂದಾಜು ತಯಾರಿಕೆ ಹಂತದಲ್ಲಿದೆ.
3.	ಮಾಗಡಿ	ಸೋಲೂರು	ಗಡೇಮಾರನಹಳ್ಳಿ ಕೆರೆ ಜೀರ್ಣೋದ್ಧಾರ	4702 ಕೆರೆ ಕಲ್ಯಾಣ	9.80	0.50	ಕಾಮಗಾರಿ ಪೂರ್ಣಗೊಂಡಿದೆ.
4.	ಮಾಗಡಿ	ಸೋಲೂರು	ಗುಡೇಮಾರನಹಳ್ಳಿ ಕೆರೆ ಹೂಳೆತ್ತುವುದು.	4702 ಕೆರೆಗಳಲ್ಲಿ ಹೂಳೆತ್ತುವುದು	5.00	1.50	ಕಾಮಗಾರಿ ಭಾಗಶಃ ಮುಗಿದಿರುತ್ತದೆ.
5.	ಬೆಂಗಳೂರು (ಉತ್ತರ)	ದಾಸನಾಪುರ	ಆಲೂರು ಕೆರೆ ಅಧುನೀಕರಣ	4702 ಕೆರೆಗಳ ಆಧುನೀಕರಣ	15.00	2.00	ಕಾಮಗಾರಿ ಪ್ರಗತಿಯಲ್ಲಿದೆ.
				ಒಟ್ಟು	39.80	7.00	

ಅನುಬಂಧ- ಆ

ಅನುಬಂಧ- ಆ

ನೆಲಮಂಗಲ ಮತಕ್ಷೇತ್ರದಲ್ಲಿ ಅತಿವೃಷ್ಟಿಯಿಂದಾಗಿ ಹಾನಿಗೊಳಗಾಗಿರುವ ಕೆರೆಗಳ ವಿವರ:-

ಕ್ರಮ ಸಂ.	ತಾಲ್ಲೂಕು	ಹೋಬಳಿ	ಕೆರೆಗಳ ಹೆಸರು	ದುರಸ್ತಿಗಾಗಿಕೈಗೊಂಡ ಕಾಮಗಾರಿ	ಅಂದಾಜು ಮೊತ್ತ (ತುರ್ತು ರಿಪೇರಿ ಒಳಗೊಂಡಂತೆ)
1.	ನೆಲಮಂಗಲ	ಕಸಬಾ	ಬರಡಿಕೆರೆ	ತೂಬಿನ ಹತ್ತಿರ ಸೋರುವಿಕೆ	0.75
2.			ಟಿ. ಬೇಗೂರು ಕೆರೆ	ತೂಬಿನ ಹತ್ತಿರ ಸೋರುವಿಕೆ	0.75
3.			ಬಿ. ಬೇಗೂರು ಕೆರೆ	ಕೋಡಿ ಮತ್ತು ಏರಿ ರಿಪೇರಿ	1.00
4.			ಅರಸಿನಕುಂಟಿ ಅಣೆ	ಅಚ್ಚುಕಟ್ಟಿನಲ್ಲಿರುವ ಪಿಕಪ್‌ಗೆ ದಾನಿ	1.00
5.	ಮಾಗಡಿ	ಸೋಲೂರು	ಗುಡೇಮಾರನಹಳ್ಳಿ ಕೆರೆ	ಕೋಡಿ ಹಳ್ಳದಲ್ಲಿ ನಿರ್ಮಿಸಿರುವ ಪಿಕಪ್ 1 ಕ್ಕೆ ಹಾನಿ	1.00
				ಒಟ್ಟು 5	4.50